ಎತ್ತಿ ನಿಲ್ಲಿಸುವ ವೇಳೆಗೆ ಮತ್ತೆ ಎರಡು ಮೂರು ಬಾರಿ ಜೋಲು ಬಂದಂತಾಗಿ ಜನರು ಎಲ್ಲಿ ತಮ್ಮ ಮೇಲೆಯೇ ಬಿದ್ದುಬಿಡುತ್ತೇನೆಂಬಂತೆ ದೂರ ಓಡಿಹೋಗಿ ನಿಲ್ಲುತ್ತಿದ್ದರು. ಅರ್ಧ ದಿನದ ಸರ್ಕಸ್ಸಿನ ನಂತರ ಕೊನೆಗೂ ನನ್ನನ್ನು ಎತ್ತಿ ನಿಲ್ಲಿಸುವಲ್ಲಿ ಯಶಸ್ವಿಯಾದರು. ವಾಲಾಡದಂತೆ ಗುಂಡಿಯ ಮಣ್ಣಿಗೂ ನನ್ನ ಬುಡಕ್ಕೂ ಮಧ್ಯೆ ಸೈಜುಗಲ್ಲನ್ನು ಹಾಕಿ, ತೂಕದ ಗುಂಡು ಇಳೇಬಿಟ್ಟು ನೆಟ್ಟ ನೇರ ನಿಲ್ಲಿಸಿದರು.

ಸುತ್ತ ಪೇರಿಸಲ್ಪಟ್ಟಿದ್ದ ಮಣ್ಣಿನ ದಿಬ್ಬದ ಮೇಲೆ ಆರೆಂಟು ಚೀಲ ವಿವಿಧ ಪೋಷಕಾಂಶದ ರಾಸಾಯನಿಕ ಗೊಬ್ಬರವನ್ನು ತಂದಿರಿಸಿದ್ದರು. ಅಲ್ಲದೇ ನಾಲ್ಕು ಟ್ರ್ಯಾಕ್ಟರ್ ದನದ ಗೊಬ್ಬರವನ್ನೂ ಹೊಡೆಸಿದ್ದರು. ಅದನ್ನು ನೋಡುತ್ತಿದ್ದಂತೆ ಮೈಸೂರು ಪಾಕನ್ನು ನೋಡಿದ ಕೂಡಲೇ ನಾಲಿಗೆಯ ತುದಿಯಲ್ಲಿ ಒಸರುವ ಬಾಯಿನೀರಿನಂತೆ ನನಗೂ ರುಚಿಯ ಮೊಗ್ಗುಗಳು ಸಕ್ರಿಯಗೊಂಡಂತಾದವು. ಎರಡು ತುಂಬಿದ ನೀರಿನ ಟ್ಯಾಂಕರುಗಳು ನೀರನ್ನು ಹಾಯಿಸಲು ಸಜ್ಜುಗೊಂಡು ನಿಂತಿದ್ದವು. ನನ್ನ ಬುಡದಲ್ಲಿ ಬೇರುಗಳೇ ಇರದಿದ್ದರಿಂದ ಎಷ್ಟೇ ಹಸಿವು ಬಾಯಾರಿಕೆಗಳಿದ್ದರೂ ತಕ್ಷಣಕ್ಕೆ ನೆಲದಿಂದ ಯಾವುದೇ ನೀರುಆಹಾರವನ್ನು ಎಳೆದುಕೊಳ್ಳಲು ಸಾಧ್ಯವಾಗುವಂತಿರಲಿಲ್ಲ.

ಆದಾಗ್ಯೂ ಯಾವಾಗ ಅದನ್ನೆಲ್ಲ ನನ್ನ ಬುಡಕ್ಕೆ ಹಾಕುತ್ತಾರೋ ಎಂದು, ಹಸಿದ ಬಾಲಕ ಬಾಡನ್ನೇ ತದೇಕಚಿತ್ತದಿಂದ ನೋಡುತ್ತ ಕುಕ್ಕರಗಾಲಲ್ಲಿ ಕುಂತಂತೆ ಕೂತು ಕಾಯಲಾರಂಭಿಸಿದೆ. ಮುಖ್ಯಮಂತ್ರಿ ಬರುವವರೆಗೆ ನನಗೆ ಅದರ ರುಚಿಯನ್ನೆಲ್ಲ ಸವಿಯುವ ಅವಕಾಶವಿರಲಿಲ್ಲವೆಂಬುದರ ಅರಿವಾಗಿ ನನ್ನ ದೃಷ್ಟಿಯನ್ನು ನೆಲದಿಂದ ಆಗಸದತ್ತ ಹೊರಳಿಸಿದೆ.

ಮರುದಿನ ಬೆಳಗ್ಗೆಯೇ ನನ್ನ ಮುಂದೆ 'ಪರಿಸರ ದಿನಾಚರಣೆ' ಎಂಬ ಫ್ಲೆಕ್ಸ್ ಹಾಕಲಾಯಿತು. ಆಗಲೇ ಗೊತ್ತಾಗಿದ್ದು, ಇವತ್ತು 'ಪರಿಸರ ದಿನಾಚರಣೆ'ಯೆಂದು. ಮೊದಲು ಇಂಥವೆಲ್ಲ ಮೊದಲೇ ಗೊತ್ತಾಗುತ್ತಿತ್ತು. ಆದರೆ ಈಗ ಮೊದಲಿನ ಹಾಗೆ ಜ್ಞಾನದ ವೇಗವಿಲ್ಲ, ಒಂದು ರೀತಿಯ ಮಂಕು ಕವಿದಂತೆ, ಮಂದವಾದ ಚಲನೆ. ಬಹುಶಃ ಎಲೆಗಳಿಲ್ಲದುದರಿಂದ ನನ್ನ ಗ್ರಹಣ ಶಕ್ತಿಯೇ ಕಡಿಮೆಯಾಗಿಹೋಗಿದೆ.

ಸೈರನ್ ಬಾರಿಸಿಕೊಂಡು ಬಂದ ಹತ್ತುಹದಿನೈದು ಕಾರುಗಳ ಪೈಕಿ ಮಧ್ಯದ ಐಷಾರಾಮಿ ಕಾರಿನಿಂದ ಮುಖ್ಯಮಂತ್ರಿಗಳು ಇಳಿದರು. ಮುಖದ ತುಂಬ ಮುಖಗವಸು ಹಾಕಿಕೊಂಡಿದ್ದರಿಂದ ಮೊದಲ ನೋಟಕ್ಕೆ ಗುರುತೇ ಸಿಗುವಂತಿರಲಿಲ್ಲ. ನೇರ ಬಂದವರೇ ನನ್ನ ಬುಡಕ್ಕೆ ಬಂದು ನಮಸ್ಕರಿಸಿ, ಯಾರಿಗೂ ಕೇಳಿಸದಂತೆ ಮನಸ್ಸಿನಲ್ಲೇ ಕ್ಷಮಾಪಣೆ ಕೇಳಿದರು. ನಾನಾದರೂ ಆತನ ಅಸಹಾಯಕತೆಗೆ ಮರುಗಿದೆ.

ದಡಾಬಡ ಬಂದ ಹತ್ತು ಹದಿನೈದು ಜನ ಅವರನ್ನು ಅನುಕರಿಸಿದರು. ಅವರು ಮೂರು ಹಿಡಿ ಮಣ್ಣನ್ನು ಎತ್ತಿ ನನ್ನ ಬುಡಕ್ಕೆ ಹಾಕಿದಾಗ ಯಾಕೋ ಹೆಣಕ್ಕೆ ಮಣ್ಣುಹಾಕಿದಂತೆನಿಸಿತು. ಅವರ ಕೈಯ



ಮಣ್ಣನ್ನು ತೊಳೆಯಲು ಜಿಲ್ಲಾಧಿಕಾರಿ ಬಿಸ್ಲೇರಿ ಬಾಟಲಿಯಿಂದ ನೀರು ಹಾಕಿದರು. ಕೈಯನ್ನು ಉಜ್ಜಿಉಜ್ಜಿ ತೊಳೆದುಕೊಂಡು ಉಗುರುಕಣ್ಣಿಗೆ ಮಣ್ಣಿನ ಕಣಗಳು ಹೋಗದಂತೆ ನೋಡಿಕೊಂಡರು. ಅದೇ ಬಾಟಲಿಯನ್ನು ತೆಗೆದುಕೊಂಡು ನೀರನ್ನು ಬುಡಕ್ಕೆ ಹಾಕಿದ್ದು ಯಾಕೋ ಸಾವಿನ ಗುಂಡಿಗೆ ತುಪ್ಪವನ್ನು ಸುರಿದಂತೆನಿಸಿತು.

ಪಕ್ಕಕ್ಕೆ ಹೋಗಿ ಶೂಗೆ ಮೆತ್ತಿದ್ದ ಮಣ್ಣನ್ನು ಒದರಲು ನೆಲಕ್ಕೆ ಎರಡು ಮೂರು ಸಲ ಕಾಲನ್ನು ಜಾಡಿಸಿದರು. ಅವರ ಉಪಸ್ಥಿತಿಯಲ್ಲೇ ಜೆಸಿಬಿಯಿಂದ ಮಣ್ಣನ್ನು ಸುತ್ತಲಿಂದಲೂ ನನ್ನ ಬುಡಕ್ಕೆ ತಳ್ಳಲಾರಂಭಿಸಿದರು. ಪ್ರಶಾಂತ್ ನಾಯಕನ ಮೇಲುಸ್ತುವಾರಿಯಲ್ಲಿ ಟ್ಯಾಂಕರಿನಿಂದ ಜೊತೆಜೊತೆಗೇ ನೀರನ್ನು ಬಿಟ್ಟು ಆ ಮಣ್ಣು ಹುಸಿಯೊಡೆಯದಂತೆ ಗಟ್ಟಿಯಾಗಿ ನನ್ನ ಬುಡದಲ್ಲಿ ಪ್ಯಾಕ್ ಆಗುವಂತೆ ನೋಡಿಕೊಳ್ಳುತ್ತಿದ್ದರು. ಪದರ ಪದರವಾಗಿ ರಾಸಾಯನಿಕ ಗೊಬ್ಬರ, ಮತ್ತೆ ಮಣ್ಣು, ಮತ್ತೆ ದನದ ಗೊಬ್ಬರ, ಮತ್ತೆ ಮಣ್ಣು... ಹೀಗೆ ನೆಲದ ಲೆವೆಲ್‌ವರೆಗೆ ಮಣ್ಣು ಮುಚ್ಚಿದರು. ಮಳೆ ಬಿದ್ದಾಗ ಮತ್ತೆ ಕುಸಿಯಬಹುದೆಂದು ಇನ್ನೊಂದು ಅಡಿ ಮಣ್ಣನ್ನು ಎತ್ತರಿಸಿ, ಅದರ ಸುತ್ತಲೂ ನೀರನ್ನು ನಿಲ್ಲಿಸಲು ಮಡಿ ಮಾಡಿ, ಅರ್ಧ ಟ್ಯಾಂಕರಿನಷ್ಟು ನೀರು ನಿಲ್ಲಿಸಿದರು.

ಅಷ್ಟು ದೂರದಲ್ಲಿ ಆರು ಅಡಿ ಎತ್ತರಕ್ಕೆ ಕಟ್ಟಿದ್ದ ಇಟ್ಟಿಗೆ ಗೋಡೆಗೆ ಅಳವಡಿಸಿದ್ದ ಶಿಲಾಶಾಸನಕ್ಕೆ ಮರೆಮಾಡಿದ್ದ ಬಟ್ಟೆಯನ್ನು ಸರಿಸಿ ಉದ್ಘಾಟನೆಯನ್ನು ಮಾಡಿದರು. ಜಿಲ್ಲಾಧಿಕಾರಿಗೆ ತಾಮ್ರದ ಫಲಕದಲ್ಲಿ ಹೆಸರನ್ನು ಬರೆಸಿ ಮರದ ಬುಡಕ್ಕೆ ಮೊಳೆ ಹೊಡೆದು ಬಂಧಿಸಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು. ಅದನ್ನು ನಿರೀಕ್ಷಿಸಿರದ ಜಿಲ್ಲಾಧಿಕಾರಿ ಅವರಿವರ ಮುಖ ನೋಡುವ ವೇಳೆಗೆ, ಮುಂದೆ ಬಂದ ಪ್ರಶಾಂತ್ ನಾಯಕ್, 'ಹಾಗೆ ಮಾಡುವುದರಿಂದ ಕಾಂಡದ ವಿಸ್ತಾರ ಹೆಚ್ಚಿದಂತೆ ಆ ತಾಮ್ರದ ಶಾಸನ ಹುದುಗಿಹೋಗುವ ಅಪಾಯವಿರುತ್ತದೆ' ಎಂದು ಸಮಜಾಯಿಷಿ ನೀಡಿ ಅವರನ್ನು ಮುಜುಗರದಿಂದ ಪಾರು ಮಾಡಿದ.

ಆಮೇಲೆ ನನ್ನನ್ನು ಉಳಿಸಿಕೊಳ್ಳಲು ಪರಿಸರವಾದಿಗಳಿಗಿಂತಲೂ ಅಧಿಕವಾಗಿ ತಾವು ಮಾಡಿದ ಪ್ರಯತ್ನಗಳ ದೊಡ್ಡ ಪಟ್ಟಿಯನ್ನೇ ನೀಡಿ, ಕರ್ಫ್ಯೂ ಸಂದರ್ಭದಲ್ಲೂ ನೆರೆದಿದ್ದ ಕೆಲವೇ ಕೆಲವು ಅಧಿಕಾರಿಗಳು, ಪತ್ರಕರ್ತರು, ಮಾಧ್ಯಮದವರ ಮುಂದೆ ಭೀಷಣವಾದ ಭಾಷಣವನ್ನೇ ಮಾಡಿದರು. 'ಒಂದು ಕಾಲದಲ್ಲಿ ಧರ್ಮೋ ರಕ್ಷತಿ ರಕ್ಷಿತಃ ಅನ್ನುತ್ತಿದ್ದರು, ಆದರೆ ಈಗ ವೃಕ್ಷೋ ರಕ್ಷತಿ ರಕ್ಷಿತಃ ಎನ್ನುವಂಥ ಕಾಲ ಬಂದಿದೆ' ಎಂದುಲಿದರು. ಅದು ಎದುರಿಗಿದ್ದ ಜನರಿಗಷ್ಟೇ ಅಲ್ಲದೇ ಇಡೀ ರಾಜ್ಯದ ಜನರಿಗೆ ಪರಿಸರ ದಿನದ ಪ್ರಯುಕ್ತ ನೀಡುತ್ತಿರುವ ಸಂದೇಶ ಎಂಬುದನ್ನು ಮನದಲ್ಲಿಟ್ಟುಕೊಂಡಿದ್ದರು.

ಅವರ ಪ್ರಕಾರ ನಾನು ಅಲ್ಲಿ ಪುನಃ ಬೇರುಬಿಡುತ್ತೇನಂತೆ, ಚಿಗುರೊಡೆಯುತ್ತೇನಂತೆ, ಸಾಂಸ್ಕೃತಿಕ ಪ್ರತೀಕವಾಗಿ ಮತ್ತೆ ಬೆಳೆದು ನಿಲ್ಲುತ್ತೇನಂತೆ.

ಇಷ್ಟು ಮಾಡಿ ಅವರು ತೆರಳಿದ ಮರುಕ್ಷಣವೇ ಒಂದೇ ಒಂದು ನರಪಿಳ್ಳೆಯೂ ಅಲ್ಲಿ ನಿಲ್ಲದೇ ಇಡೀ ಪರಿಸರ ಖಾಲಿಯಾಗಿ ಹೋಯಿತು. ಇನ್ನು ನಾನುಂಟು, ನನ್ನ ಬುಡದಲ್ಲಿನ ಮಣ್ಣು ಗೊಬ್ಬರವುಂಟು.

ಸಮೃದ್ಧ ಆಹಾರ ನನ್ನ ಬುಡದಲ್ಲೇ ಇದ್ದರೂ ಅದರ ರುಚಿ ನನ್ನ ಕಾಂಡಕ್ಕೆ ಹತ್ತಲಿಲ್ಲ. ಎಷ್ಟು ತಿಣುಕಾಡಿದರೂ ಬೇರುಗಳ ಕುಡಿಯೊಡೆಸಲು ಆ ಕ್ಷಣಕ್ಕೆ ಸಾಧ್ಯವಾಗಲಿಲ್ಲ. ನಾಟಿ ಮಾಡಿದರೆ ಚಿಗುರೊಡೆಯುವ ವಯಸ್ಸೇ ನನ್ನದು. ನನ್ನ ಬುಡವನ್ನು ಆಕ್ರಮಿಸಿದ್ದ ಮಣ್ಣುಗೊಬ್ಬರಾದಿಗಳು ನನ್ನನ್ನು ಬದುಕಿಸುತ್ತಾವೋ, ಇಲ್ಲ ಮಣ್ಣೊಳಗೆ ಸಮಾಧಿ ಮಾಡಿಬಿಡುತ್ತವೋ ಗೊತ್ತಿಲ್ಲ. ಇನ್ನು ಅದು ಹೇಗೆ ನಾನು ಬೇರುಗಳನ್ನು ಬಿಡುತ್ತೇನೋ, ರೆಂಬೆಗಳಿಂದ ಎಲೆಗಳನ್ನು ಚಿಗುರೊಡೆಸುತ್ತೇನೋ ಗೊತ್ತಿಲ್ಲ. ಬೇರುಗಳಿರದ, ರೆಂಬೆಕೊಂಬೆಗಳಿಲ್ಲದ ಕಾಂಡದೊಂದಿಗೆ ಹೀಗೆ ಜೀವಚ್ಛವವಾಗಿ ಬದುಕುವುದಕ್ಕಿಂತ ಸಂಪೂರ್ಣ ಒಣಗಿಹೋಗಿಬಿಡುವುದೇ ವಾಸಿ ಎಂದು ಅನ್ನಿಸಲಾರಂಭಿಸಿತು. ಆದರೂ ನಾನು ಎಲ್ಲವನ್ನೂ ಧನಾತ್ಮಕವಾಗಿಯೇ ಪರಿಗಣಿಸಬೇಕೆಂದು ಬಯಸುವ ಆಶಾವಾದಿ.

ಒಂದು ವೇಳೆ ಬೇರುಗಳು ಮೊಳೆತಲ್ಲಿ, ಕೊರಡು ಕೊನರಿ ಮರುಜೀವ ಬಂದಲ್ಲಿ ಹೊಸ ಹುರುಪಿನೊಂದಿಗೆ, ಹೊಸ ಕಥನದೊಂದಿಗೆ ನಿಮ್ಮ ಮುಂದೆ ಮತ್ತೆ ಬರುತ್ತೇನೆ... ಬಂದು ಮತ್ತೊಂದು ಹೊಸ ಕಥೆ ಹೇಳುತ್ತೇನೆ...

ಪ್ರತಿಕ್ರಿಯಿಸಿ: **feedback@sudha.co.in**